# ‘ಬಿಸಿಗಾಳಿ ತುಂಬಿದ ಆಕಾಶಬುಟ್ಟಿ’ ಮತ್ತು ಕಪಡೋಕಿಯಾದ ಭೂದೃಶ್ಯ



‘ಹಾಟ್ ಏರ್ ಬಲೂನ್’ನಲ್ಲಿ ಗಾಳಿಯಲ್ಲಿ ತೇಲುವ ಅನುಭವ ಟರ್ಕಿ ಪ್ರವಾಸವನ್ನು ಅವಿಸ್ಮರಣೀಯಗೊಳಿಸುವ ಸಂಗತಿಗಳಲ್ಲೊಂದು. ಸಮುದ್ರಮಟ್ಟದಿಂದ ಸುಮಾರು 1000 ಮೀಟರ್ ಎತ್ತರದಿಂದ ಕೆಳಗೆ ನೋಡಿದರೆ ಯಾವುದೋ ಅನ್ಯಗ್ರಹವನ್ನು ನೋಡಿದಂತೆ ಭಾಸವಾಗುತ್ತದೆ.

■ ಡಿ.ಜಿ. ಮಲ್ಲಿಕಾರ್ಜುನ

ಟರ್ಕಿ ದೇಶದ ಐತಿಹಾಸಿಕ ಪ್ರದೇಶ ಕಪಡೋಕಿಯಾದಲ್ಲಿ ಪ್ರತಿ ಮುಂಜಾನೆ ಆಗಸದ ತುಂಬೆಲ್ಲಾ ನೂರಾರು ಬಿಸಿ ಗಾಳಿಯ ಬಲೂನ್‌ಗಳು ಹಾರುತ್ತವೆ. ‘ಹಾಟ್ ಏರ್ ಬಲೂನ್’ ಅರ್ಥಾತ್ ‘ಬಿಸಿಗಾಳಿ ತುಂಬಿದ ಆಕಾಶಬುಟ್ಟಿ’ಯಲ್ಲಿ ನಿಂತು ಗಾಳಿಯಲ್ಲಿ ತೇಲುತ್ತಾ ಕೆಳಗೆ ನೋಡಿದರೆ, ಈ ಭೂಮಿಯ ಭಾಗವೇ ಅಲ್ಲವೇನೋ ಎಂಬಂತೆ ಕಂಡುಬರುವ ಅಲ್ಲಿನ ಭೂಲಕ್ಷಣ ಅನ್ಯಗ್ರಹದಲ್ಲಿರುವ ಭ್ರಮೆ ಹುಟ್ಟಿಸುತ್ತದೆ.

ಇಲ್ಲಿ ನೈಸರ್ಗಿಕವಾಗಿ ಎತ್ತರದ ಕೋನ್ ಆಕಾರದ ಕಲ್ಲಿನ ರಚನೆಗಳು ರೂಪುಗೊಂಡಿವೆ. ಕಪಡೋಕಿಯ ಸುತ್ತಲಿನ ಮೂರು ಪರ್ವತಗಳಾದ ಎರ್ಸಿಯಸ್, ಹಸನ್ ಮತ್ತು ಗುಲ್ಲುಡಗ್ ಸುಮಾರು 30 ಮಿಲಿಯನ್ ವರ್ಷಗಳ ಹಿಂದೆ ಉಗುಳಿದ ಜ್ವಾಲಾಮುಖಿ ಈ ಶಿಲಾವೈಭವವನ್ನು ರೂಪಿಸಿದೆ. ಶಿಲಾರಸ, ಗಾಳಿ ಮತ್ತು ಮಳೆ ಬಂಡೆಗಳನ್ನು ಕೊರೆದು, ಕಣಿವೆಗಳನ್ನು ರೂಪಿಸಿ, ಕಾಲ್ಪನಿಕ ಚಿಮಣಿಗಳು ಹಾಗೂ ವಕ್ರಗತಿಯ ಕೆತ್ತನೆ ಮಾಡಿದೆ.

ಮುಂಜಾನೆ 5.30ಕ್ಕೆಲ್ಲ ನಾವು ಉಳಿದಿದ್ದ ಹೋಟೆಲಿನಿಂದ ತಮ್ಮದೇ ವಾಹನದಲ್ಲಿ ‘ಹಾಟ್ ಏರ್ ಬಲೂನ್’ ಕಂಪನಿಯವರು ಕರೆದೊಯ್ಯುತ್ತಾರೆ. ಕಾಫಿ, ಟೀ ಮತ್ತು ಬಿಸ್ಕತ್ ನೀಡಿ ಸತ್ಕರಿಸುವಷ್ಟರಲ್ಲಿ, ಬಟ್ಟೆಯಿಂದ ಮಾಡಿದ ದೊಡ್ಡ ಬಲೂನಿಗೆ ಬಿಸಿ ಗಾಳಿ ತುಂಬಿಸುತ್ತಾರೆ. ಬಿಸಿ ಗಾಳಿ ತುಂಬುತ್ತಾ ಮಲಗಿದ್ದ ಬೆಲೂನು ಮೆಲ್ಲನೆ ಎದ್ದು ನಿಲ್ಲತೊಡಗುತ್ತದೆ. ಅದರ ತಳದಲ್ಲಿ ಬಲೂನ್ ಒಳಗಿನ ಗಾಳಿಯನ್ನು ಬಿಸಿಮಾಡುವ ಒಲೆಯ ಜೊತೆಗೆ ನಾವು ನಿಲ್ಲುವ ಬುಟ್ಟಿಯಿರುತ್ತದೆ. ಬುಟ್ಟಿಯನ್ನು ಐದು ಭಾಗಗಳಾಗಿ ವಿಂಗಡಿಸಿರುತ್ತಾರೆ. ಸುತ್ತಲಿನ ನಾಲ್ಕು ಭಾಗಗಳಲ್ಲಿ ತಲಾ ನಾಲ್ಕು ಮಂದಿ ನಿಲ್ಲಬಹುದು. ಮಧ್ಯದಲ್ಲಿ ಬಿಸಿ ಗಾಳಿಯ ಒಲೆ, ಸಿಲಿಂಡರ್ ಹಾಗೂ ಪೈಲಟ್.

ಪೈಲಟ್ ತನ್ನನ್ನು ಪರಿಚಯಿಸಿಕೊಂಡು, ತನ್ನ ಹಾರಾಟದ ಅನುಭವವನ್ನು ವಿವರಿಸುತ್ತಾನೆ. ಬುಟ್ಟಿಯೊಳಗಿನ ಆಧಾರಗಳನ್ನು ಭದ್ರವಾಗಿ ಹಿಡಿದುಕೊಂಡು ನಿಲ್ಲಲು ಸೂಚನೆ ಕೊಡುತ್ತಾನೆ. ಬಿಸಿ ಗಾಳಿಯನ್ನು ಬಿಟ್ಟು ಬಲೂನನ್ನು ನಿಧಾನವಾಗಿ ಮೇಲೆ ಹಾರಿಸುತ್ತಾನೆ.